# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗವನ್ನು ಕೇಂದ್ರ ನೀತಿ ಆಯೋಗದ ಮಾದರಿಯಲ್ಲಿ ಪುನರ್ ರಚಿಸುವ ಕುರಿತು.

ಓದಲಾಗಿದೆ: 1. ನೀತಿ ಆಯೋಗದ ಅರೆ ಸರ್ಕಾರಿ ಪತ್ರ ಸಂಖ್ಯೆ: M-13040/44/2018-S-Co ದಿನಾಂಕ: 28.01.2019.

2. ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ: 365/2022ಗೆ ಮಾನ್ಯ ಮುಖ್ಯ ಮಂತ್ರಿಯವರ ಅನುಮೋದಿತ ಟಿಪ್ಪಣಿ ದಿನಾಂಕ: 4.8.2022.

\- - -

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೇಂದ್ರ ಸರ್ಕಾರದ ನೀತಿ ಆಯೋಗವು ಯೋಜನಾ ಇಲಾಖೆ ಮತ್ತು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಉಸ್ತುವಾರಿ ಯೋಜನಾ ಮಂಡಳಿಗಳ ಕಾರ್ಯದರ್ಶಿಗಳೊಂದಿಗಿನ ಸಭೆಯಲ್ಲಿ ರಾಜ್ಯ ಯೋಜನಾ ಮಂಡಳಿಯನ್ನು ರಾಜ್ಯ ಮಟ್ಟದಲ್ಲಿ ನೀತಿ ನಿರೂಪಣೆಗಾಗಿ ರಾಜ್ಯ ಮಟ್ಟದ ಚಿಂತನಾ ಬಳಗ (Think Tank) ವನ್ನಾಗಿ ಪರಿವರ್ತಿಸಲು ಪ್ರಸ್ತಾಪಿಸಿದ್ದು, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗವನ್ನು (Karnataka State Policy and Planning Commission-KSPPC) ಪುನರ್ ರಚಿಸಲು ನಿರ್ಣಯಿಸಲಾಗಿದೆ. ನೀತಿ ಆಯೋಗದ ಸಲಹೆಯ ಆಧಾರದ ಮೇಲೆ ನೀತಿ ಆಯೋಗದ (National Institution for Transforming India-NITI) ಮಾದರಿಯಂತೆ ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆ (State Institute for Transformation of Karnataka -SITK) ರಚನೆ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದೆ.

ಪ್ರಸ್ತಾವಿತ ಸಾಂಸ್ಥಿಕ ರಚನೆ ಪ್ರಕಾರ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆ (SITK)ಯ ಅಧ್ಯಕ್ಷರಾಗಿರುತ್ತಾರೆ ಮತ್ತು ಸರ್ಕಾರದ ಯೋಜನೆ ಹಾಗೂ ಸಂಬಂಧಿತ ವಿಷಯಗಳಲ್ಲಿ ಪರಿಣಿತರಾದವರನ್ನು ಸರ್ಕಾರದಿಂದ ಉಪಾಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಲಾಗುವುದು. ನೀತಿ ಆಯೋಗದ ಮಾದರಿಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳು -2030 ಮತ್ತು ಭಾರತ @ 2047 ಗುರಿಗಳ ಮೇಲೆ ಕೇಂದ್ರೀಕರಿಸಲು (1) ಶಿಕ್ಷಣ, (2) ಆರೋಗ್ಯ ಮತ್ತು ಪೋಷಣೆ, (3) ಕೃಷಿ ಮತ್ತು ಕೈಗಾರಿಕೆ, (4) ಗ್ರಾಮೀಣ ಮತ್ತು ನಗರಾಭಿವೃದ್ಧಿ, (5) ವಿಜ್ಞಾನ ಮತ್ತು ತಂತ್ರಜ್ಞಾನ, (6) ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ, (7) ಶುದ್ಧ ಮತ್ತು ಹಸಿರು ಇಂಧನ ಮತ್ತು (8) ಆರ್ಥಿಕತೆ ಮತ್ತು ಹಣಕಾಸು ವಲಯಗಳಾಗಿ ಒಟ್ಟು 8 ವಲಯ ಪರಿಣಿತರನ್ನು ಸಲಹೆಗಾರರನ್ನಾಗಿ ನೇಮಿಸಲಾಗುವುದು.

ಈ ಸಂಸ್ಥೆಯಲ್ಲಿ ಯೋಜನೆ, ಆರ್ಥಿಕ, ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ ಮತ್ತು ಮಾಹಿತಿ ತಂತ್ರಜ್ಞಾನ(IT & BT) ಇಲಾಖೆಗಳ ಸಚಿವರು ವಿಶೇಷ ಆಹ್ವಾನಿತರಾಗಿರುತ್ತಾರೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 316
ದಿನಾಂಕ 08-08-2022
ಗಣಕ ಸಂಖ್ಯೆ
ದಿನಾಂಕ
10.08.2022
Malathi.C

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ – ಯೋಜನಾ ಇಲಾಖೆ ರವರು ಈ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ, ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ಯೋಜನೆ, ಆರ್ಥಿಕ, ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ ಮತ್ತು ಮಾಹಿತಿ ತಂತ್ರಜ್ಞಾನ(IT & BT) ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ಇತರೆ ಅಧಿಕೃತ ಸದಸ್ಯರಾಗಿರುತ್ತಾರೆ.

ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯಲ್ಲಿ (1) ಕರ್ನಾಟಕ ಇನ್ನೋವೇಟಿವ್ ಅಥಾರಿಟಿ (2) ಹಣಕಾಸು ನೀತಿ ಸಂಸ್ಥೆ (3) ಕರ್ನಾಟಕ ರಾಜ್ಯ ಕಾರ್ಮಿಕ ಸಂಸ್ಥೆ (4) ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (5) ಆಡಳಿತ ತರಬೇತಿ ಸಂಸ್ಥೆ (6) ಅಬ್ದುಲ್ ನಜೀರ್ ಸಾಬ್ ಸ್ಟೇಟ್ ಇನ್ಸ್ಟಿಟ್ಯೂಟ್ ಫಾರ್ ರೂರಲ್ ಡೆವಲಪ್ಮೆಂಟ್ ಅಂಡ್ ಪಂಚಾಯತ್ ರಾಜ್ (ANSIRD), ಮೈಸೂರು (7) ಸ್ಟೇಟ್ ಇನ್ಸ್ಟಿಟ್ಯೂಟ್ ಆಫ್ ಅರ್ಬನ್ ಡೆವಲೆಪ್ಮೆಂಟ್ (SIUD), ಮೈಸೂರು (8) ಆಡಳಿತ ಸುಧಾರಣೆ – II (9) ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (10) ಜ್ಞಾನ ಆಯೋಗ (11) ಭಾರತೀಯ ವಿಜ್ಞಾನ ಸಂಸ್ಥೆ (IISc) (12) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ - ಬೆಂಗಳೂರು (IIMB) (13) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ (NLSIU) ಮತ್ತು (14) ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ (ISEC) ಗಳಾದ ಸುಮಾರು **14 ಪ್ರಖ್ಯಾತ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳನ್ನು** "ಪಾಲುದಾರ ಸಂಸ್ಥೆಗಳಾಗಿ" ಹೊಂದುವುದು. ಅಲ್ಲದೆ, ಯೋಜನಾ ಇಲಾಖೆಯ ಅಸ್ತಿತ್ವದಲ್ಲಿರುವ ವಿಭಾಗಗಳಾದ ಜಿಲ್ಲಾ ಯೋಜನಾ ವಿಭಾಗ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ತಾಂತ್ರಿಕ ವಿಭಾಗ, ಸಚಿವಾಲಯದ ಬೆಂಬಲಕ್ಕಾಗಿ ಗ್ರಂಥಾಲಯ ಮತ್ತು ಪ್ರಕಟಣೆ ಮತ್ತು ಆಡಳಿತ ವಿಭಾಗ, ಇವುಗಳನ್ನು ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ (SITK) ಬೆಂಬಲಕ್ಕಾಗಿ ಸೇರ್ಪಡೆಗೊಳಿಸಲು ಪ್ರಸ್ತಾಪಿಸಲಾಗಿದೆ. ನೀತಿ ಆಯೋಗದ ಅಭಿವೃದ್ಧಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಛೇರಿ (Development Monitoring and Evaluation Office-DMEO) ಮಾದರಿಯಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ (Karnataka Monitoring and Evaluation Authority - KMEA) ಎಂದು ಮರುನಾಮಕರಣ ಮಾಡಲಾಗುವುದು.

**ಹತ್ತು ತಾಂತ್ರಿಕ ವಿಭಾಗಗಳಾದ** ಕೃಷಿ, ಶಿಕ್ಷಣ, ಕೈಗಾರಿಕೆ,ಗ್ರಾಮೀಣ ಮತ್ತು ನಗರಾಭಿವೃದ್ಧಿ, ಆರ್ಥಿಕ ಮತ್ತು ಸಾಮಾಜಿಕ,ಆರೋಗ್ಯ ಮತ್ತು ಪೋಷನೆ, ಶುದ್ಧ ಮತ್ತು ಹಸಿರುವ ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶ ಮತ್ತು ಆರ್ಥಿಕತೆ ಮತ್ತು ಹಣಕಾಸು ವಿಭಾಗಗಳನ್ನು ರಚಿಸಲಾಗುವುದು.

## II. ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ ಸ್ಥಾಪನೆಯ ಪ್ರಮುಖ ಉದ್ದೇಶಗಳು:

1) **ಅತ್ಯಾಧುನಿಕ ಸಂಪನ್ಮೂಲ ಕೇಂದ್ರವಾಗಿ** ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡುವುದು, ಉತ್ತಮ ಆಡಳಿತ ಅಭ್ಯಾಸಗಳನ್ನು ಅನುಷ್ಠಾನಗೊಳಿಸುವುದು, ಅವಿಷ್ಕಾರ ಹಾಗೂ ಜ್ಞಾನವನ್ನು ಉತ್ತೇಜಿಸುವುದು ಮತ್ತು ಸಾಕ್ಷ್ಯಾಧಾರಿತ ನೀತಿ ರಚನೆಗೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ಆಧರಿಸಿ, ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ – 2030 ಗುರಿಗಳಿಗೆ ಮತ್ತು ಭಾರತ@2047ಕ್ಕೆ ಹೊಂದಿಕೊಂಡು ರಾಜ್ಯದ ಯೋಜನೆಗಳನ್ನು ರೂಪಿಸುವುದು.



Malathi C

2) ನವ ಭಾರತ ನಿರ್ಮಾಣಕ್ಕೆ ಹೆಚ್ಚಿನ ಕೊಡುಗೆ ನೀಡಲು **ನವ ಕರ್ನಾಟಕ ವಿಕಸನಗೊಳ್ಳಲು** ರಾಜ್ಯದ ಆದ್ಯತೆಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರದ ಯೋಜನೆ ಹಾಗೂ ಆಯವ್ಯಯ ತಯಾರಿಯನ್ನು ನಡೆಸುವುದು.

3) ಅಗತ್ಯ ದಕ್ಷ ಆಡಳಿತ, ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ, ಮೂಲಸೌಕರ್ಯ ಅಭಿವೃದ್ಧಿ, ಸರ್ಕಾರಿ ವ್ಯವಹಾರ ಪ್ರಕ್ರಿಯೆಯ ಕಾರ್ಯಕ್ಷಮತೆ ಮತ್ತು ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ **ರಾಜ್ಯದ ಒಟ್ಟು ಆಂತರಿಕ ಉತ್ಪನ್ನವನ್ನು (Gross State Domestic Product -GSDP) ಹೆಚ್ಚಿಸುವುದರೊಂದಿಗೆ** ದೇಶದ ಬೆಳವಣಿಗೆಗಾಗಿ ರಾಜ್ಯದ ಕೊಡುಗೆಯನ್ನು ಸುಧಾರಿಸುವುದು.

**III. ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ ಪಾತ್ರಗಳು / ಕಾರ್ಯಗಳು;**

i. ಸುಸ್ಥಿರ ಅಭಿವೃದ್ಧಿ ಗುರಿಗಳ ಮುನ್ನೋಟ (SDGs Vision- 2030) ಮತ್ತು ಭಾರತ@2047 ಗುರಿಗಳನ್ನು ಸಾಧಿಸಲು ಅಗತ್ಯಕ್ಕೆ ಅನುಗುಣವಾಗಿ **ಸಂಶೋಧನೆ ಹಾಗೂ ವಿನೂತನ** (proof of concept) ಚಟುವಟಿಕೆಗಳನ್ನು ತೆಗೆದುಕೊಳ್ಳುವುದು.

ii. ರಾಜ್ಯ/ಜಿಲ್ಲೆ/ತಾಲ್ಲೂಕು/ಗ್ರಾಮ ಪಂಚಾಯತ್ ಮಟ್ಟದಲ್ಲಿ ಯೋಜನೆಯನ್ನು ಒಳಗೊಂಡಿರುವ **ಸಹಕಾರಿ ಸ್ಥಳೀಯ** ಆಡಳಿತವನ್ನು ಉತ್ತೇಜಿಸುವುದು.

iii. ಸ್ಥಳೀಯ ಸಂಪನ್ಮೂಲಗಳ ಸಮರ್ಥ ಬಳಕೆ ಹಾಗೂ ಪಾಲ್ಗೊಳ್ಳುವಿಕೆಯ ಮೂಲಕ **ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆಯನ್ನು** (Grama Panchayat Development Plan - GPDP) ಬಲಪಡಿಸುವುದು.

iv. ಸರ್ಕಾರ, ಖಾಸಗಿ ವಲಯ, ನಾಗರೀಕ ಸಮಾಜ ಮತ್ತು ಅಂತರಾಷ್ಟ್ರೀಯ ತಜ್ಞರು, ವೃತ್ತಿಪರರು (Professionals) ಮತ್ತು ನಿಗಮಗಳಂತಹ ವಿವಿಧ ಪಾಲುಗಾರರ ಸಹಯೋಗ ಪಡೆದು **ರಾಜ್ಯ ಸಮಗ್ರ ಅಭಿವೃದ್ಧಿ ದರ ಹೆಚ್ಚಿಸುವುದು**.

v. **ಮಹತ್ವಾಕಾಂಕ್ಷೆಯ** ಜಿಲ್ಲೆಗಳು/ ತಾಲ್ಲೂಕುಗಳು/ ಗ್ರಾಮ ಪಂಚಾಯತ್‌ಗಳನ್ನು ಆಯ್ಕೆ ಮಾಡಿ ರಾಜ್ಯ ಸರಾಸರಿಗೆ ಏರಿಸುವುದು.

vi. ಅಭಿವೃದ್ಧಿ ನೀತಿಯನ್ನು ಉತ್ತೇಜಿಸಲು ಅಂತರ-ವಲಯ/ಅಂತರ್ ಇಲಾಖಾ **ಸಮಸ್ಯೆಗಳ ನಿವಾರಣೆಗೆ ಸಮನ್ವಯ ವೇದಿಕೆಯ** ಮೂಲಕ ಪರಿಹಾರ ಒದಗಿಸುವುದು.

vii. ಸರ್ಕಾರದ ಎಲ್ಲಾ ಕಾರ್ಯಕ್ರಮಗಳ ಪ್ರಗತಿ ಮತ್ತು ಪರಿಣಾಮಕಾರಿತ್ವದ ಮೇಲ್ವಿಚಾರಣೆ ಹಾಗೂ **ನೀತಿ ಚೌಕಟ್ಟುಗಳು** ಮತ್ತು ಉಪಕ್ರಮಗಳನ್ನು ವಿನ್ಯಾಸಗೊಳಿಸುವುದು.

viii. ಆರೋಗ್ಯ, ಶಿಕ್ಷಣ, ಆಡಳಿತ, ಜೀವನೋಪಾಯ, ಪರಿಸರ, ಇತ್ಯಾದಿಗಳಂತಹ ವಿವಿಧ ಪ್ರಮುಖ ಕ್ಷೇತ್ರಗಳ ಮೇಲೆ ಜಿಲ್ಲೆಗಳು/ತಾಲ್ಲೂಕುಗಳ ಪ್ರಗತಿಯನ್ನು ಶ್ರೇಣೀಕರಿಸುವುದು ಮತ್ತು ಅವುಗಳ ನಡುವೆ ಸ್ಪರ್ಧೆಯನ್ನು ಹೆಚ್ಚಿಸುವುದು ಮತ್ತು **ಆರ್ಥಿಕ ಪ್ರೋತ್ಸಾಹದ** ಮೂಲಕ ದಕ್ಷತೆಯನ್ನು ಉತ್ತೇಜಿಸುವುದು.

Malathi .C

ಸರ್ಕಾರವು ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ 47 ಎಸ್‌ಪಿಬಿ 2021,**

**ಬೆಂಗಳೂರು, ದಿನಾಂಕ: 06.08.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು ಕೇಂದ್ರದ ನೀತಿ(NITI) ಆಯೋಗದ ಮಾದರಿಯಂತೆ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗವನ್ನು ನವ ಭಾರತಕ್ಕಾಗಿ **ನವ ಕರ್ನಾಟಕ ನಿರ್ಮಿಸಲು ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆ (SITK)** ಎಂದು ರಚಿಸಲು ಅನುಬಂಧದಲ್ಲಿನ ಪ್ರಸ್ತಾಪಿತ ಸಾಂಸ್ಥಿಕ ರಚನೆಯಂತೆ ಅನುಮೋದಿಸಿದೆ (ಅನುಬಂಧ - 1).

ಪ್ರಸ್ತಾವಿತ ಸಾಂಸ್ಥಿಕ ರಚನೆ ಪ್ರಕಾರ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಗೆ ಅಧ್ಯಕ್ಷರಾಗಿರುತ್ತಾರೆ(Chairman) ಮತ್ತು ಸರ್ಕಾರದ ಯೋಜನೆ ಹಾಗೂ ಸಂಬಂಧಿಸಿದ ವಿಷಯಗಳಲ್ಲಿ ಪರಿಣಿತರಾದವರನ್ನು **ಸರ್ಕಾರದಿಂದ ಉಪಾಧ್ಯಕ್ಷರನ್ನಾಗಿ (Vice Chairman)** ನಾಮನಿರ್ದೇಶನ ಮಾಡಲಾಗುವುದು.

ಈ ಸಂಸ್ಥೆಯಲ್ಲಿ ಯೋಜನೆ, ಆರ್ಥಿಕ, ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ ಮತ್ತು ಮಾಹಿತಿ ತಂತ್ರಜ್ಞಾನ(IT & BT) ಇಲಾಖೆಗಳ ಸಚಿವರು ವಿಶೇಷ ಆಹ್ವಾನಿತರಾಗಿರುತ್ತಾರೆ.

ನೀತಿ ಆಯೋಗದ ಮಾದರಿಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಭಾರತ @2047 ಗುರಿಗಳ ಮೇಲೆ ಕೇಂದ್ರೀಕರಿಸಲು ಶಿಕ್ಷಣ, ಆರೋಗ್ಯ ಮತ್ತು ಪೋಷಣೆ, ಕೃಷಿ ಮತ್ತು ಕೈಗಾರಿಕೆ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ, ಶುದ್ಧ ಮತ್ತು ಹಸಿರು ಇಂಧನ ಮತ್ತು ಆರ್ಥಿಕತೆ ಮತ್ತು ಹಣಕಾಸು ವಲಯಗಳಾಗಿ ಒಟ್ಟು **8 ವಲಯ ಪರಿಣಿತರನ್ನು ಸಲಹೆಗಾರರನ್ನಾಗಿ** ನೇಮಿಸಲಾಗುವುದು.

ಹತ್ತು ತಾಂತ್ರಿಕ ವಿಭಾಗಗಳಾದ ಕೃಷಿ, ಶಿಕ್ಷಣ, ಕೈಗಾರಿಕೆ,ಗ್ರಾಮೀಣ ಮತ್ತು ನಗರಾಭಿವೃದ್ಧಿ, ಆರ್ಥಿಕ ಮತ್ತು ಸಾಮಾಜಿಕ,ಆರೋಗ್ಯ ಮತ್ತು ಪೋಷನೆ, ಶುದ್ಧ ಮತ್ತು ಹಸಿರುವ ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶ ಮತ್ತು ಆರ್ಥಿಕತೆ ಮತ್ತು ಹಣಕಾಸು ವಿಭಾಗಗಳನ್ನು ರಚಿಸಲಾಗುವುದು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ – ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ರವರು ಈ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ (Chief Executive Officer) ಹಾಗೂ ಸಲಹೆಗಾರರನ್ನು ಸಹಕರಿಸಲು (1) ಬಡತನ ನಿರ್ಮೂಲನೆ (2) ಆದಾಯ, ಆಹಾರ ಮತ್ತು ಪೌಷ್ಠಿಕಾಂಶದ ಭದ್ರತೆ (3) ಸೇವೆಗಳ ಸರಳೀಕರಣ (4) ಸ್ವಚ್ಛ ಮತ್ತು ಹಸಿರು ಇಂಧನ (5) ಸಂಪನ್ಮೂಲಗಳ ನಿರ್ವಹಣೆ (6) ಲಿಂಗ ಸಮಾನತೆ (7) ಕೈಗಾರಿಕೆ ಮತ್ತು ಮೂಲಸೌಕರ್ಯ ನಾವೀನ್ಯತೆ ಮತ್ತು (8) ಕೌಶಲ್ಯಾಭಿವೃದ್ಧಿಗಳಂತಹ 8 ವಿಷಯ ತಜ್ಞರನ್ನು ನೇಮಿಸಲಾಗುವುದು.

ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯಲ್ಲಿ (1) ಕರ್ನಾಟಕ ಇನ್ನೋವೇಟಿವ್ ಅಥಾರಿಟಿ (2) ಹಣಕಾಸು ನೀತಿ ಸಂಸ್ಥೆ (3) ಕರ್ನಾಟಕ ರಾಜ್ಯ ಕಾರ್ಮಿಕ ಸಂಸ್ಥೆ (4) ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (5) ಆಡಳಿತ ತರಬೇತಿ ಸಂಸ್ಥೆ (6) ಅಬ್ದುಲ್ ನಜೀರ್ ಸಾಬ್ ಸ್ಟೇಟ್ ಇನ್ಸ್‌ಟಿಟ್ಯೂಟ್ ಫಾರ್ ರೂರಲ್ ಡೆವಲಪ್ಮೆಂಟ್ ಅಂಡ್ ಪಂಚಾಯತ್



Malathi. C

ರಾಜ್ (ANSIRD), ಮೈಸೂರು (7) ಸ್ಟೇಟ್ ಇನ್ಸ್‌ಟಿಟ್ಯೂಟ್ ಆಫ್ ಅರ್ಬನ್ ಡೆವಲೆಪ್ಮೆಂಟ್ (SIUD), ಮೈಸೂರು (8) ಆಡಳಿತ ಸುಧಾರಣೆ – II (9) ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (10) ಜ್ಞಾನ ಆಯೋಗ (11) ಭಾರತೀಯ ವಿಜ್ಞಾನ ಸಂಸ್ಥೆ (IISc) (12) ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ - ಬೆಂಗಳೂರು (IIMB) (13) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ (NLSIU) ಮತ್ತು (14) ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ (ISEC) ಗಳಾದ ಸುಮಾರು 14 ಪ್ರಖ್ಯಾತ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳನ್ನು "ಪಾಲುದಾರ ಸಂಸ್ಥೆಗಳಾಗಿ" ಹೊಂದುವುದು.

ಯೋಜನಾ ಇಲಾಖೆಯ ಅಸ್ತಿತ್ವದಲ್ಲಿರುವ ವಿಭಾಗಗಳಾದ ಜಿಲ್ಲಾ ಯೋಜನಾ ವಿಭಾಗ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ತಾಂತ್ರಿಕ ವಿಭಾಗ, ಸಚಿವಾಲಯದ ಬೆಂಬಲಕ್ಕಾಗಿ ಗ್ರಂಥಾಲಯ ಮತ್ತು ಪ್ರಕಟಣೆ ಮತ್ತು ಆಡಳಿತ ವಿಭಾಗ, ಇವುಗಳನ್ನು ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ (SITK) ಬೆಂಬಲಕ್ಕಾಗಿ ಸೇರ್ಪಡೆಗೊಳಿಸುವುದು. ನೀತಿ ಆಯೋಗದ ಅಭಿವೃದ್ಧಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಛೇರಿ (Development Monitoring and Evaluation Office-DMEO) ಮಾದರಿಯಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ (Karnataka Monitoring and Evaluation Authority - KMEA) ಎಂದು ಮರುನಾಮಕರಣ ಮಾಡಲಾಗುವುದು.

ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯನ್ನು (SITK) ಪರಿಣಾಮಕಾರಿಯಾಗಿ ನಡೆಸಲು ಹಾಗೂ ಯಶಸ್ವಿಯಾಗಿ ಗುರಿಗಳನ್ನು ಸಾಧಿಸಲು **ವಾರ್ಷಿಕ ರೂ.150.00 ಕೋಟಿಗಳನ್ನು ಹಂಚಿಕೆ ಮಾಡಲಾಗುವುದು**. ಆಡಳಿತ ಸುಧಾರಣೆಗಳ ಸ್ಪರ್ಧಾತ್ಮಕ ನಿಧಿಯನ್ನು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ, ಕರ್ನಾಟಕ ಇನ್ನೋವೇಶನ್ ಅಥಾರಿಟಿಯ ಇನ್ನೋವೇಶನ್ ಫಂಡ್, ಸೆಂಟರ್ ಫಾರ್ ಓಪನ್ ಡಾಟಾ ರಿಸರ್ಚ್ (Center for Open Data Research- CODR), ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರ(SDGCC) ಇತ್ಯಾದಿಗಳ ಅಡಿಯಲ್ಲಿ ಹಂಚಿಕೆಯಾದ ಅನುದಾನವನ್ನು ವಿಲೀನಗೊಳಿಸಲಾಗುವುದು.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Malathi. C
6/8/2022
(ಮಾಲತಿ. ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್-3)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ.

Malathi. C

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು (ಲೆಕ್ಕ ಪತ್ರ) / ಆಡಿಟ್, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು,.
7. ಮಾನ್ಯ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಮುಖ್ಯ ಮೌಲ್ಯಮಾಪನಾಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬೆಂಗಳೂರು.
10. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ), 3ನೇ ಮಹಡಿ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ (ಕಾಂಪೆಂಡಿಯಂಗಾಗಿ).
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Malati.C

# ಅನುಬಂಧ – 1

## ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ ಸಾಂಸ್ಥಿಕ ರಚನೆ

### ಅಧ್ಯಕ್ಷರು

(ಮಾನ್ಯ ಮುಖ್ಯ ಮಂತ್ರಿಗಳು)

### ಉಪಾಧ್ಯಕ್ಷರು

(ಸರ್ಕಾರದಿಂದ ನೇಮಿಸಲಾಗುವದು)

### ವಿಶೇಷ ಆಹ್ವಾನಿತರು

1. ಯೋಜನಾ ಸಚಿವರು
2. ಹಣಕಾಸು ಸಚಿವರು
3. ಸಮಾಜ ಕಲ್ಯಾಣ ಸಚಿವರು
4. ಶಿಕ್ಷಣ ಸಚಿವರು
5. ಆರೋಗ್ಯ ಸಚಿವರು
6. ಕೃಷಿ ಸಚಿವರು
7. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರು
8. ನಗರಾಭಿವೃದ್ಧಿ
9. ಐಟಿ ಮತ್ತು ಬಿಟಿ

### ಉಪಾಧ್ಯಕ್ಷರ ಆಪ್ತ ಶಾಖೆ

1. ಆಪ್ತ ಕಾರ್ಯದರ್ಶಿ– 1
2. ರಿಸರ್ಚ್ ಆಫೀಸರ್– 1
3. ಕಂಪ್ಯೂಟರ್ ಪ್ರೋಗ್ರಾಮರ್– 1
4. ಅಕೌಂಟ್ಸ್ ಆಫೀಸರ್/ಎಟಿಪಿ–1
5. ಶೀಘ್ರ ಲಿಪಿಗಾರರು – 1
6. ಆಪ್ತ ಸಹಾಯಕರು – 5
7. ಡೇಟಾ ಅನಲಿಸ್ಟ್– 10
8. ಗ್ರೂಪ್ ಡಿ – 10
9. ವಾಹನ ಚಾಲಕರು – 4

### ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

(ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ) ಯೋಜನಾ ಇಲಾಖೆ

### ಅಧಿಕಾರಿಗಳು ಸದಸ್ಯರು

1. ಮುಖ್ಯ ಕಾರ್ಯದರ್ಶಿ
2. ಅಪರ ಮುಖ್ಯ ಕಾರ್ಯದರ್ಶಿ
3. ಅಭಿವೃದ್ಧಿ ಆಯುಕ್ತರು
4. ಅ.ಮು.ಕಾ. / ಪ್ರ.ಕಾ. / ಕಾ. ಹಣಕಾಸು
5. ಅ.ಮು.ಕಾ. / ಪ್ರ.ಕಾ. / ಕಾ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
6. ಅ.ಮು.ಕಾ. / ಪ್ರ.ಕಾ. / ಕಾ. ಸಮಾಜ ಕಲ್ಯಾಣ
7. ಅ.ಮು.ಕಾ. / ಪ್ರ.ಕಾ. / ಕಾ. ಆರೋಗ್ಯ
8. ಅ.ಮು.ಕಾ. / ಪ್ರ.ಕಾ. / ಕಾ. ಶಿಕ್ಷಣ
9. ಅ.ಮು.ಕಾ. / ಪ್ರ.ಕಾ. / ಕಾ. ನಗರಾಭಿವೃದ್ಧಿ
10. ಅ.ಮು.ಕಾ. / ಪ್ರ.ಕಾ. / ಕಾ. ಆರ್‌ಡಿಪಿಆರ್

### ಜಿಲ್ಲಾ ಯೋಜನಾ ವಿಭಾಗ

### ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ

### ಸಂಶೋಧನಾ ವಿಭಾಗ

1. ಕೃಷಿ
2. ಶಿಕ್ಷಣ
3. ಕೈಗಾರಿಕೆ
4. ಗ್ರಾಮೀಣ ಮತ್ತು ನಗರ ಅಭಿವೃದ್ಧಿ
5. ಆರ್ಥಿಕ ಮತ್ತು ಸಾಮಾಜಿಕ
6. ಆರೋಗ್ಯ ಮತ್ತು ಪೋಷಣೆ
7. ಶುದ್ಧ & ಹಸಿರು ಇಂಧನ
8. ವಿಜ್ಞಾನ ಮತ್ತು ತಂತ್ರಜ್ಞಾನ
9. ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ
10. ಆರ್ಥಿಕತೆ ಮತ್ತು ಹಣಕಾಸು

### ಗ್ರಂಥಾಲಯ ಮತ್ತು ಪ್ರಕಟಣೆ

### ಆಡಳಿತ ವಿಭಾಗ

### ಸಲಹಾ ಸಂಸ್ಥೆಗಳು

1. ಕರ್ನಾಟಕ ಇನ್ನೋವೇಟಿವ್ಸ್ ಅಥಾರಿಟಿ
2. ಹಣಕಾಸು ನೀತಿ ಸಂಸ್ಥೆ
3. ಕರ್ನಾಟಕ ರಾಜ್ಯ ಕಾರ್ಮಿಕ ಸಂಸ್ಥೆ
4. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ
5. ಆಡಳಿತ ತರಬೇತಿ ಸಂಸ್ಥೆ, ಮೈಸೂರು
6. ಎಎನ್‌ಎಸ್‌ಐಆರ್‌ಡಿ, ಮೈಸೂರು
7. ಎಸ್‌ಐಯುಡಿ, ಮೈಸೂರು
8. ಆಡಳಿತ ಸುಧಾರಣೆ – II
9. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ
10. ಜ್ಞಾನ ಆಯೋಗ
11. ಭಾರತೀಯ ವಿಜ್ಞಾನ ಸಂಸ್ಥೆ (IISc)
12. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ (IIMs)
13. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ (NLSIU)
14. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ (ISEC)
15. ಇತರೆ ಪ್ರತಿಷ್ಠಿತ ಸಂಸ್ಥೆಗಳು/ ಮಂಡಳಿಯಿಂದ ನಾಮನಿರ್ದೇಶನಗೊಂಡವರು

### ಅಧಿಕಾರೇತರ ಸದಸ್ಯರು – ವಿಷಯ ತಜ್ಞರು (ಸರ್ಕಾರದಿಂದ ನೇಮಿಸಲಾಗುವುದು)

1. ಬಡತನ ನಿರ್ಮೂಲನೆ
2. ಆದಾಯ, ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆ
3. ಸೇವೆಗಳ ಸರಳೀಕರಣ (Access to services)
4. ಸ್ವಚ್ಛ ಮತ್ತು ಹಸಿರು ಇಂಧನ
5. ಸಂಪನ್ಮೂಲಗಳ ನಿರ್ವಹಣೆ
6. ಲಿಂಗ ಸಮಾನತೆ
7. ಕೈಗಾರಿಕೆ ಮತ್ತು ಮೂಲಸೌಕರ್ಯ ನಾವಿನ್ಯತೆ
8. ಕೌಶಲ್ಯಾಭಿವೃದ್ಧಿ

Malati. C